**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 88/2020**

**ಚಾ.ಸಾಃ 22, ಫ್ರಾ.ಸಾಃ 13**

| | |
|---|---|
| ಸಾಕ್ಷಿದಾರನ ಹೆಸರು | ಚೆಲುವರಾಜು |
| ತಂದೆಯ ಹೆಸರು | ಬೆಟ್ಟೆಗೌಡ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ಡಿ.ವೈ.ಎಸ್.ಪಿ., ನಾಗಮಂಗಲ |
| ವಾಸ್ತವ್ಯ | ನಾಗಮಂಗಲ |

**ಸಾಕ್ಷಿಯನ್ನು ದಿನಾಂಕಃ 24-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಡಿಸೆಂಬರ-2017 ರಿಂದ ಸೆಪ್ಟಂಬರ-2019 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **07-05-2019** ರಂದು ಚಾಸಾ-21 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಶ್ವಾನದಳವನ್ನು ಮತ್ತು ಬೆರಳಚ್ಚು ತಜ್ಞರನ್ನು ಕರೆಸಿ ನಂತರ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ತಯಾರಿಸಿ, ಒಂದು ಕಚ್ಚಾ ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿ 2 ಫೋಟೋ ತೆಗೆಸಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. 2 ಫೋಟೋಗಳನ್ನು ನೋಡುತ್ತಿದ್ದು ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

ಅದೇ ದಿನ ಸಾಕ್ಷಿದಾರರಾದ ಚಾಸಾ-3 ಮತ್ತು 8 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ ಕೇಸಿನ ಕಡತವನು ಚಾಸಾ-23 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ಪಿರ್ಯಾದಿಯ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳಿವೆ. ಪಂಚರನ್ನು ಘಟನಾ ಸ್ಥಳಕ್ಕೆ ನಾನು ಹೋದ ನಂತರ ಸಿಬ್ಬಂದಿಯ ಮೂಲಕ ಕರೆಸಿರುತ್ತೇನೆ. ಚಾಸಾ-2 ಕುಮಟಾ ತಾಲೂಕಿನವನು ಎಂದರೆ ಸರಿ, ಚಂದಾವರ ಗ್ರಾಮಕ್ಕೆ ಹತ್ತಿರ ಇದೆ. ಚಾಸಾ-3 ಹೊದ್ಕೆಶಿರೂರಿನವರು, ಪಿರ್ಯಾದಿಯ ಅಕ್ಕನ ಗಂಡ. ಚಂದಾವರದಿಂದ ಹೊದ್ಕೆಶಿರೂರು 8 ಕಿಲೋಮೀಟರ್ ದೂರ ಎಂದರೆ ಸರಿಯಲ್ಲ, 4 ಕಿಲೋಮೀಟರ್ ಆಗುತ್ತದೆ. ನನ್ನ ಸಮಕ್ಷಮದಲ್ಲಿ ಬೆರಳಚ್ಚು ತಜ್ಞರಿಗೆಯಾವುದೇ ಆಕಸ್ಮಿಕ ಬೆರಳು ಮುದ್ರೆಗಳು ಸಿಕ್ಕಿರಲಿಲ್ಲ, ನನ್ನ ಪಂಚನಾಮೆಯ ನಂತರ ಅವರು ತಮ್ಮ ತನಿಖೆಯನ್ನು ಮುಂದುವರೆಸಿರುತ್ತಾರೆ. ಶ್ವಾನದಳದವರು ಸ್ಥಳಕ್ಕೆ ಬರುವ ಪೂರ್ವದಲ್ಲಿ ನಮ್ಮ ಕಚೇರಿಗೆ ತಿಳಿಸುವ ಅವಶ್ಯಕತೆ

ಇರುವುದಿಲ್ಲ. ನೇರವಾಗಿ ತಕ್ಷೀಲು ಸ್ಥಳಕ್ಕೆ ಬರಬಹುದು. ಸ್ಥಳದಲ್ಲಿ ಶ್ವಾನದಳದವರು ಏನೆಲ್ಲ ಪರಿಶೀಲಿಸಿರುತ್ತಾರೋ ಆ ಬಗ್ಗೆ ನಮಗೆ ವರದಿ ನೀಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ನಾನು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-2 ನ್ನು ಯಾರು ತಯಾರು ಮಾಡಿರುತ್ತಾರೆ ಎಂಬ ಬಗ್ಗೆ ಅದರಲ್ಲಿ ನಮೂದು ಇಲ್ಲ ಎಂದರೆ ಸರಿ. ಫಿರ್ಯಾದಿಯ ಮನೆಯ ಅಕ್ಕಪಕ್ಕದವರ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿದ್ದೆ, ಪಂಚನಾಮೆ ಮಾಡಿದ್ದೆ ಮತ್ತು ಕಚ್ಚಾ ನಕಾಶೆ ತಯಾರಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**